# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1120** |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 21.08.2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ವಿವಿಧ ಕಾರಾಗೃಹಗಳು ಎಷ್ಟು ಸಂಖ್ಯೆಯ ಕೈದಿಗಳಿಗೆ ಆಶ್ರಯ ಕೊಡುವ ಸಾಮರ್ಥ್ಯ ಹೊಂದಿವೆ ಮತ್ತು ಸದರಿ ಕಾರಾಗೃಹಗಳಲ್ಲಿ ಪ್ರಸ್ತುತ ಇರುವ ಕೈದಿಗಳ ಸಂಖ್ಯೆ ಎಷ್ಟು; (ಪ್ರತಿ ಕಾರಾಗೃಹವಾರು ವಿವರ ನೀಡುವುದು.)</td><td>ರಾಜ್ಯದಲ್ಲಿ ಒಟ್ಟು 54 ವಿವಿಧ ಮಾದರಿಯ ಕಾರಾಗೃಹಗಳು ಕಾರ್ಯನಿರ್ವಹಿಸುತ್ತಿದ್ದು, ಬಂದಿಗಳ ಅಧಿಕೃತ ಸಾಮರ್ಥ್ಯ 14,617 ಆಗಿರುತ್ತದೆ. ಕಾರಾಗೃಹಗಳಲ್ಲಿ ದಿನಾಂಕ: 31-07-2025ರ ಅಂತ್ಯಕ್ಕೆ ಬಂದಿಗಳ ಸಂಖ್ಯಾ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಆ)</td><td>ಬಹುತೇಕ ಕಾರಾಗೃಹಗಳಲ್ಲಿ ಕೈದಿಗಳ ದಟ್ಟಣೆಯೇ ಸಮಸ್ಯೆಯಾಗಿದ್ದು, ಕೈದಿಗಳ ಸ್ಥಳಾಂತರಕ್ಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಅವಶ್ಯ ಕ್ರಮ ಕೈಗೊಳ್ಳದಿರಲು ಕಾರಣವೇನು;</td><td>ರಾಜ್ಯದ ಕಾರಾಗೃಹಗಳಲ್ಲಿ ಬಂದಿಗಳ ದಟ್ಟಣೆ ಕಡಿಮೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.
<table>
<tr><th>ಕ್ರ ಸಂ</th><th>ನೂತನ ಕಾರಾಗೃಹಗಳ ನಿರ್ಮಾಣ</th><th>ಬಂದಿಗಳ ಸ್ಥಳಾವಕಾಶ</th><th>ಷರಾ</th></tr>
<tr><td>1</td><td>ಕೇಂದ್ರ ಕಾರಾಗೃಹ, ವಿಜಯಪುರ</td><td>1000</td><td rowspan="3">ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ.</td></tr>
<tr><td>2</td><td>ಕೇಂದ್ರ ಕಾರಾಗೃಹ, ಬೀದರ್</td><td>1000</td></tr>
<tr><td>3</td><td>ಗರಿಷ್ಠ ಭದ್ರತಾ ಕೇಂದ್ರ ಕಾರಾಗೃಹ, ಬೆಂಗಳೂರು</td><td>1000</td></tr>
<tr><td>4</td><td>ಕೇಂದ್ರ ಕಾರಾಗೃಹ, ಮಂಗಳೂರು</td><td>1000</td><td>1ನೇ ಹಂತದ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ.</td></tr>
<tr><td>5</td><td>ಕೇಂದ್ರ ಕಾರಾಗೃಹ, ಬೆಂಗಳೂರು ಗ್ರಾಮಾಂತರ, ದೇವನಹಳ್ಳಿ</td><td>600</td><td>ಕಾಮಗಾರಿ ಪ್ರಗತಿಯಲ್ಲಿದೆ</td></tr>
</table></td></tr>
</table>

| | | | |
|---|---|---|---|
| 6 | ಗರಿಷ್ಠ ಭದ್ರತಾ ಕೇಂದ್ರ ಕಾರಾಗೃಹ, ಶಿವಮೊಗ್ಗ | 320 | ಕಾಮಗಾರಿ ಪ್ರಗತಿಯಲ್ಲಿದೆ. |
| 7 | ತಾಲ್ಲೂಕು ಕಾರಾಗೃಹ ಅರಸೀಕೆರೆ | 50 | ಕಾಮಗಾರಿ ಮುಕ್ತಾಯಗೊಂಡಿರುತ್ತದೆ. |
| 8 | ತಾಲ್ಲೂಕು ಕಾರಾಗೃಹ ಹಳಿಯಾಳ | 100 | |
| 9 | ತಾಲ್ಲೂಕು ಕಾರಾಗೃಹ ಹರಪ್ಪನಹಳ್ಳಿ | 100 | |
| 10 | ತಾಲ್ಲೂಕು ಕಾರಾಗೃಹ ವಿರಾಜಪೇಟೆ | 80 | ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ. |
| 11 | ತಾಲ್ಲೂಕು ಕಾರಾಗೃಹ ಅಳಂದ | 125 | |
| | **ಒಟ್ಟು** | **5375** | |

- ರಾಜ್ಯದ 10 ವಿವಿಧ ಕಾರಾಗೃಹಗಳ ಆವರಣದಲ್ಲಿ 1,475 ಬಂದಿಗಳಿಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಲು ಹೆಚ್ಚುವರಿ ಬ್ಯಾರಕ್ ನಿರ್ಮಾಣ ಕಾಮಗಾರಿ ಮುಕ್ತಾಯಗೊಂಡಿರುತ್ತದೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ಕಾರಾಗೃಹ | ಹೆಚ್ಚುವರಿ ಸ್ಥಳಾವಕಾಶ |
|---|---|---|
| 1. | ಕೇಂದ್ರ ಕಾರಾಗೃಹ, ಕಲಬುರ್ಗಿ | 300 |
| 2. | ಕೇಂದ್ರ ಕಾರಾಗೃಹ, ಮೈಸೂರು | 255 |
| 3. | ಕೇಂದ್ರ ಕಾರಾಗೃಹ, ಬಳ್ಳಾರಿ | 300 |
| 4. | ಜಿಲ್ಲಾ ಕಾರಾಗೃಹ, ಕೊಪ್ಪಳ | 150 |
| 5. | ಜಿಲ್ಲಾ ಕಾರಾಗೃಹ, ಹಾವೇರಿ | 100 |
| 6. | ಜಿಲ್ಲಾ ಕಾರಾಗೃಹ, ರಾಮನಗರ | 80 |
| 7. | ಜಿಲ್ಲಾ ಕಾರಾಗೃಹ, ತುಮಕೂರು | 100 |
| 8. | ತಾಲ್ಲೂಕು ಕಾರಾಗೃಹ, ಹುಬ್ಬಳ್ಳಿ | 80 |
| 9. | ತಾಲ್ಲೂಕು ಕಾರಾಗೃಹ, ಗೋಕಾಕ | 60 |

| | | |
|---|---|---|
| | | <table><tr><td>10.</td><td>ಬಯಲು ಕಾರಾಗೃಹ ದೇವನಹಳ್ಳಿ</td><td>50</td></tr><tr><td></td><td>ಒಟ್ಟು</td><td>1475</td></tr></table><br>• ಕಾರಾಗೃಹಗಳ ಉಪಮಹಾನಿರೀಕ್ಷಕರು, ಉತ್ತರ / ದಕ್ಷಿಣ ವಲಯ, ಬೆಳಗಾವಿ/ಬೆಂಗಳೂರು ರವರುಗಳು, ಅವರ ವ್ಯಾಪ್ತಿಯ ಕಾರಾಗೃಹಗಳಲ್ಲಿ ಬಂದಿಗಳ ದಟ್ಟಣೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ, ಹೆಚ್ಚಿನ ಬಂದಿಗಳ ದಟ್ಟಣೆಯನ್ನು ಹೊಂದಿರುವ ಕಾರಾಗೃಹಗಳಿಂದ ಕಡಿಮೆ ಬಂದಿಗಳ ದಟ್ಟಣೆಯನ್ನು ಹೊಂದಿರುವ ಕಾರಾಗೃಹಗಳಿಗೆ ಬಂದಿಗಳನ್ನು ವರ್ಗಾವಣೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |
| ಇ) | ಕಾರಾಗೃಹಗಳಲ್ಲಿ ಭದ್ರತಾ ಮೌಲ್ಯಮಾಪನ ಮತ್ತು ಕೈದಿಗಳ ಪ್ರತ್ಯೇಕತೆ ಸೂಕ್ತವಾಗಿ ಜಾರಿಯಾಗಿದೆಯೇ; ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು : | ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆ ಕೈಪಿಡಿ-2021ರ ಅಧ್ಯಾಯ-11 ರಲ್ಲಿ ಬಂದಿಗಳ ವರ್ಗೀಕರಣ ಮತ್ತು ಪ್ರತ್ಯೇಕತೆ (Classification & Separation of Prisoners) ಕುರಿತು ತಿಳಿಸಿದ್ದು, ಅದರನ್ವಯ ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಬಂದಿಗಳ ವರ್ಗೀಕರಣ ಮತ್ತು ಪ್ರತ್ಯೇಕತೆ ಕುರಿತು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |
| ಈ) | ಕಾರಾಗೃಹಗಳಲ್ಲಿ ವ್ಯಾಪಕ ಸುಧಾರಣೆ ತರುವ ನಿಟ್ಟಿನಲ್ಲಿ ಅಲ್ಲಿನ ಸಮಸ್ಯೆಗಳ ನಿವಾರಣೆಗೆ ಜೈಲು ಆಡಳಿತದಲ್ಲಿ ಪಾರದರ್ಶಕತೆ ತರುವುದು ಮತ್ತು ಜೈಲು ಆಡಳಿತದಲ್ಲಿ ತಂತ್ರಜ್ಞಾನದ ಸಮರ್ಪಕ ಮತ್ತು ಪರಿಣಾಮಕಾರಿ ಬಳಕೆ ಆಗಬೇಕಿದ್ದು, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; | • ಕಾರಾಗೃಹಗಳ ಆಡಳಿತದಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಈಗಾಗಲೇ ಇ-ಪ್ರಿಸನ್ಸ್ ತಂತ್ರಾಂಶವನ್ನ ಅಳವಡಿಸಿಕೊಳ್ಳಲಾಗಿರುತ್ತದೆ. ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ವಿಡಿಯೋ ಕಾನ್ಫರೆನ್ಸ್ ಸೌಲಭ್ಯ ಒದಗಿಸಲಾಗಿದ್ದು, ಸದರಿ ವಿಡಿಯೋ ಕಾನ್ಫರೆನ್ಸ್ ಮೂಲಕ ಬಂದಿಗಳನ್ನು ವಿವಿಧ ಗೌ\|\| ನ್ಯಾಯಲಯಗಳಿಗೆ ಹಾಜರುಪಡಿಸಲಾಗುತ್ತಿದೆ ಮತ್ತು ಕಾರಾಗೃಹಗಳಗಳಲ್ಲಿ ಇ-ಆಫೀಸ್ ತಂತ್ರಾಂಶ ಅಳವಡಿಕೆ ಕಾರ್ಯ ಪ್ರಗತಿಯಲ್ಲಿರುತ್ತದೆ ಮತ್ತು ಕೇಂದ್ರ ಕಾರಾಗೃಹ ಬೆಂಗಳೂರಿನಲ್ಲಿರುವ 280 ಸಂಖ್ಯೆ ಸಿಸಿಟಿವಿಗಳಿಗೆ AI-Powered Audio Video Analytics System ಅಳವಡಿಸಲಾಗಿದೆ. |
| ಉ) | ಕಾರಾಗೃಹಗಳು ಪರಿವರ್ತನೆಯ ಕೇಂದ್ರಗಳಾಗಬೇಕು ಅಪರಾಧಿಯ ಶಿಕ್ಷೆ ಮುಗಿಸಿ ಜೈಲಿನಿಂದ ಹೊರ ಬರುವಾಗ ಮನಪರಿವರ್ತನೆ ಹೊಂದಿ ಸಮಾಜದಲ್ಲಿ ಉತ್ತಮ ನಾಗರೀಕನಾಗಿ ಬಾಳಬೇಕು ಎಂಬ ಆಶಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ವಿಶೇಷ ಸುಧಾರಣಾ ಕ್ರಮಗಳೇನು ? | **ಕಾರಾಗೃಹಗಳಲ್ಲಿ ಬಂದಿಗಳ ಮನಃ ಪರಿವರ್ತನೆ ಸಂಬಂಧ ಕೈಗೊಳ್ಳಲಾಗುತ್ತಿರುವ ಸುಧಾರಣಾ ಕ್ರಮಗಳು:-**<br>• ಅನಕ್ಷರಸ್ಥ ಬಂದಿಗಳನ್ನು ಸಾಕ್ಷರಸ್ಥರನ್ನಾಗಿ ಮಾಡಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಉನ್ನತ ಶಿಕ್ಷಣಕ್ಕಾಗಿ ರಾಜ್ಯ ಮುಕ್ತ ವಿಶ್ವವಿದ್ಯಾಲಯಗಳಲ್ಲಿ ಬಂದಿಗಳಿಗೆ ಶಿಕ್ಷಣ ಕಲ್ಪಿಸಲಾಗುತ್ತಿದೆ.<br>• ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಬಂದಿಗಳ ಕೌಶಲ್ಯಾಭಿವೃದ್ಧಿಯನ್ನು ಹೆಚ್ಚಿಸಲು ವಿವಿಧ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.<br>• ಕಾರಾಗೃಹಗಳಲ್ಲಿ ಗ್ರಂಥಾಲಯಗಳನ್ನು ನಿರ್ಮಿಸಲಾಗಿದ್ದು, ಆಸಕ್ತ ಬಂದಿಗಳ ಅಧ್ಯಯನಕ್ಕೆ ಅನುಕೂಲ ಮಾಡಿಕೊಡಲಾಗಿದೆ. |

| | | |
|---|---|---|
| | | • ಶಿಕ್ಷಾ ಬಂದಿಗಳ ಮನಪರಿವರ್ತನೆಯ ಉದ್ದೇಶದಿಂದ ಕರ್ನಾಟಕ ಕಾರಾಗೃಹಗಳ ನಿಯಮಗಳ ಪ್ರಕಾರ ಶಿಕ್ಷಾ ಬಂದಿಗಳಿಗೆ ಕೆಲಸ ಹಂಚಿಕೆ ಮಾಡಿ, ಮಾಫಿ ಮತ್ತು ಕೂಲಿ ಹಣವನ್ನು ನೀಡಲಾಗುತ್ತಿದೆ.<br>• ಶಿಕ್ಷಾ ಬಂದಿಗಳ ಮನಪರಿವರ್ತನೆಯ ಉದ್ದೇಶದಿಂದ ಕರ್ನಾಟಕ ಕಾರಾಗೃಹಗಳ ನಿಯಮಗಳ ಪ್ರಕಾರ ಶಿಕ್ಷಾ ಬಂದಿಗಳಿಗೆ ಸಾಮಾನ್ಯ ಪೆರೋಲ್ ಮತ್ತು ತುರ್ತು ಪೆರೋಲ್ ರಜೆಯನ್ನು ಮಂಜೂರು ಮಾಡಲಾಗುತ್ತಿದೆ.<br>• ಜೀವಾವಧಿ ಶಿಕ್ಷಾ ಬಂದಿಗಳ ಮನಪರಿವರ್ತನೆಯ ಉದ್ದೇಶದಿಂದ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಜೀವಾವಧಿ ಶಿಕ್ಷಾ ಬಂದಿಗಳನ್ನು ಪ್ರತಿ ವರ್ಷ 03 ಬಾರಿ ಸನ್ನಡತೆಯ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆ ಮಾಡಲಾಗುತ್ತಿದೆ.<br>• ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯಲ್ಲಿ ಹೆಚ್ಚಿನ ಸುಧಾರಣೆ ತರುವ ನಿಟ್ಟಿನಲ್ಲಿ "ಕರ್ನಾಟಕ ಅಭಿವೃದ್ಧಿ ಮಂಡಳಿ ಕಾಯ್ದೆ 2021" ನ್ನು ಜಾರಿಗೆ ತರಲಾಗಿದೆ.<br>• ರಾಜ್ಯದ ಕಾರಾಗೃಹಗಳಲ್ಲಿ ಕೃಷಿ ಮತ್ತು ಕೈಗಾರಿಕೆಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಇಲಾಖೆಯ ಅಧಿಕಾರಿಗಳ ತಂಡವು ಆಂಧ್ರ ಪ್ರದೇಶದ ಕೇಂದ್ರ ಕಾರಾಗೃಹದಲ್ಲಿನ ಕೃಷಿ ಮತ್ತು ಕೈಗಾರಿಕೆಗಳನ್ನು ಮಾದರಿಯನ್ನು ಅಧ್ಯಯನ ನಡೆಸಿ ವರದಿ ಸಲ್ಲಿಸಿದ್ದು, ಕರ್ನಾಟಕ ರಾಜ್ಯ ಕಾರಾಗೃಹ ಅಭಿವೃದ್ಧಿ ಮಂಡಳಿಯಲ್ಲಿ ಸದರಿ ವರದಿಯಲ್ಲಿನ ಅಂಶಗಳನ್ನು ಕಾರಾಗೃಹಗಳಲ್ಲಿ ಅಳವಡಿಸಿಕೊಂಡು ಕೃಷಿ ಮತ್ತು ಕೈಗಾರಿಕೆಗಳನ್ನು ಮೇಲ್ದರ್ಜೆಗೇರಿಸಲು ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 235 ಪಿಆರ್‌ಎ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

ಅನುಬಂಧ

## ~~Annexure —~~ I

# Prison wise Current Inmate Population as on 31.07.2025

| SL No. | Name of the Prison | Actual Authorised Capacity of Prisons | Present Prisoner Population |
|---|---|---|---|
| 1 | CENTRAL PRISON, BENGALURU | 4146 | 5016 |
| 2 | Open Prison, Devanahalli | 80 | 47 |
| 3 | District Prison, Ramanagara | 200 | 291 |
| 4 | District Prison, Kolar | 82 | 133 |
| 5 | Taluka Prison, K.G.F. | 76 | 76 |
| 6 | District Prison, Tumakuru | 340 | 358 |
| 7 | Taluka Prison, Tiptur | 25 | 0 |
| 8 | District Prison, Chikkaballapura | 192 | 247 |
| 9 | Taluka Prison, Chinthamani | 125 | 102 |
| 10 | CENTRAL PRISON, MYSURU | 562 | 787 |
| 11 | Taluka Prison, K.R. Nagar | 115 | 69 |
| 12 | Taluka Prison, Nanjangud | 90 | 47 |
| 13 | District Prison, Chamarajnagar | 105 | 140 |
| 14 | District Prison, Mandya | 272 | 281 |
| 15 | District Prison, Hassan | 259 | 191 |
| 16 | Taluka Prison, Sakaleshpur | 125 | 29 |
| 17 | District Prison, Madikeri | 300 | 183 |
| 18 | CENTRAL PRISON, SHIVAMOGGA | 500 | 759 |
| 19 | WOMEN CENTRAL PRISON, SHIVAMOGGA | 100 | 38 |
| 20 | Taluka Prison, Sagara | 54 | 0 |
| 21 | District Prison, Mangaluru | 210 | 353 |
| 22 | District Prison, Chikkamagaluru | 149 | 170 |
| 23 | District Prison, Udupi | 110 | 152 |
| 24 | District Prison, Davangere | 170 | 191 |
| 25 | District Prison, Chitradurga | 300 | 223 |
| 26 | CENTAL PRISON, BELAGAVI | 1162 | 842 |
| 27 | Taluka Prison, Gokak | 40 | 65 |
| 28 | Taluka Prison, Bailahongala | 48 | 33 |
| 29 | District Prison, Karwar | 230 | 102 |
| 30 | Taluka Prison, Haliyala | 104 | 43 |
| 31 | CENTRAL PRISON, DHARWAD | 675 | 511 |
| 32 | Taluka Prison, Hubballi | 185 | 154 |
| 33 | District Prison, Haveri | 110 | 196 |
| 34 | District Prison, Gadag | 48 | 79 |
| 35 | CENTRAL PRISON, VIJAYAPURA | 320 | 485 |
| 36 | District Prison, Bagalkote | 260 | 111 |
| 37 | Taluka Prison, Jamkhandi | 200 | 61 |
| 38 | CENTRAL PRISON, KALABURGI | 545 | 607 |
| 39 | District Prison, Yadgiri | 80 | 47 |
| 40 | Taluka Prison, Shorapur | 50 | 52 |
| 41 | District Prison, Bidar | 184 | 123 |
| 42 | Taluka Prison, Aurad | 95 | 19 |
| 43 | Taluka Prison, Humnabad | 60 | 56 |
| 44 | CENTRAL PRISON, BALLARI | 747 | 477 |
| 45 | Taluka Prison, Hosapete | 45 | 52 |
| 46 | Taluka Prison, Hadagali | 150 | 39 |
| 47 | Taluka Prison, Harappanahalli | 100 | 28 |
| 48 | District Prison, Raichur | 160 | 137 |
| 49 | Taluka Prison, Devadurga | 40 | 0 |
| 50 | Taluka Prison, Lingasugur | 10 | 42 |
| 51 | District Prison, Koppal | 110 | 149 |
| 52 | Revenue Prison, Sirsi | 48 | 0 |
| 53 | Revenue Prison, Sedam | 60 | 39 |
| 54 | Revenue Prison, Madhugiri | 42 | 49 |
| | Total | 14617 | 14481 |